# ಹಂಪಿ ಟೈಮ್ಸ್

**HAMPI TIMES**
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 250 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.04.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 250 • PRGI No:KARKAN/2023/88055 • VIJAYANAGARA • 10.04.2025 • Thursday • Page:04 • Rs:2



Good Opportunity for Branding
1,25,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

**ನಿತ್ಯ ಅಭಿಷೇಕ ಸಮಯ**
**ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ**

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

# ಏಕಾಏಕಿ ಆಸ್ತಿ ತೆರಿಗೆ ಹೆಚ್ಚಳಕ್ಕೆ ಜನಾಕ್ರೋಶ

## ಆಸ್ತಿ ಮಾಲೀಕರೊಂದಿಗೆ ಚರ್ಚೆ ಮಾಡದೇ, ಜಾಗೃತಿ ಮೂಡಿಸದೇ ತಂತ್ರಾಂಶದಲ್ಲಿ ತೆರಿಗೆ ಹೆಚ್ಚಿಸಿದ ನಗರಸಭೆ

## ನಗರದ ಖಾಲಿ ನಿವೇಶನಕ್ಕೆ ಶೇ.3, ವಸತಿಗೆ ಶೇ.4 ಮತ್ತು ವಾಣಿಜ್ಯ-ಕೈಗಾರಿಕೆಗೆ ಶೇ.5 ರಷ್ಟು ತೆರಿಗೆ ಹೆಚ್ಚಳಕ್ಕೆ ಜನ ತತ್ತರ

**ಹಂಪಿ ಟೈಮ್ಸ್ ಹೊಸಪೇಟೆ**

ನಗರಸಭೆ ಸಾರ್ವಜನಿಕರಲ್ಲಿ ಆಸ್ತಿ ತೆರಿಗೆ ಏರಿಕೆ ಬಗ್ಗೆ ಜಾಗೃತಿ ಮೂಡಿಸದೇ, ಆಸ್ತಿ ಮಾಲೀಕರೊಂದಿಗೆ ಸಮಗ್ರ ಚರ್ಚೆ ಮಾಡದೇ ಏಕಾಏಕಿ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರ ಸುತ್ತೋಲೆಯನುಸಾರ ಶೇ.3 ರಿಂದ ಶೇ.5ರವರೆಗೆ ತಂತ್ರಾಂಶದಲ್ಲಿ ಆಸ್ತಿ ತೆರಿಗೆ ಏರಿಕೆ ಮಾಡಿ ಜಾರಿಗೊಳಿಸಿರುವುದಕ್ಕೆ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ತತ್ತರಿಸುತ್ತಿರುವ ಜನಸಾಮಾನ್ಯರಿಗೆ ನಗರಸಭೆಯ ವ್ಯಾಪ್ತಿಯಲ್ಲಿ ಖಾಲಿ ನಿವೇಶನ, ವಸತಿ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಈಗಾಗಲೇ ತೆರಿಗೆ ಹೆಚ್ಚಿಸಲಾಗಿದೆ. ಏರಿಸಿರುವ ಆಸ್ತಿ ತೆರಿಗೆ ಭಾರ ಭೂಮಾಲೀಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಸಣ್ಣ ಮಟ್ಟದ ಮನೆ ಮಾಲೀಕರು, ಮಧ್ಯಮವರ್ಗದವರು ಮತ್ತು ನಿವೃತ್ತರಾದವರ ಜೀವನದ ಮೇಲೆ ನೇರ ಪರಿಣಾಮ ಬೀರಲಿದೆ.

ಈಗಾಗಲೇ ಬಸ್ ಧರ, ಹಾಲಿನ ಧರ, ವಿದ್ಯುತ್ ಬಿಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾದ ಬೆನ್ನಲ್ಲೆ ಆಸ್ತಿ ತೆರಿಗೆಯೂ ಸದ್ದಿಲ್ಲದೆ ಏರಿಸಲಾಗಿದೆ. ಇದು ಬಾಡಿಗೆದಾರರ ಮೇಲೂ ಪ್ರಭಾವ ಬೀರಲಿದ್ದು, ಬಾಡಿಗೆದಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಆತಂಕದಲ್ಲಿದ್ದಾರೆ. ಸಣ್ಣ ವ್ಯಾಪಾರಸ್ಥರಲ್ಲಿ ನಿರ್ವಹಣಾ ಸಾಮರ್ಥ್ಯವನ್ನು ಕುಗ್ಗಿಸಿ, ವ್ಯಾಪಾರಗಳಿಂದ ವಿಮುಖರಾಗಬಹುದಾಗಿದೆ. ಸಣ್ಣಪುಟ್ಟ ವ್ಯಾಪಾರಮಾಡಿಕೊಂಡು ಸ್ವಾಭಿಮಾನ ಬದುಕು ಕಟ್ಟಿಕೊಳ್ಳಲು ಹೊರಟವರಿಗೆ ತೆರಿಗೆ ಭಾರ ದಿಕ್ಕುತೋಚದಂತಾಗಿದೆ ಎನ್ನುತ್ತಿದ್ದಾರೆ ಸಾರ್ವಜನಿಕರು.

ಆಸ್ತಿ ತೆರಿಗೆ ಹೆಚ್ಚಳವು ಶಾಶ್ವತ ಅಭಿವೃಧಿಗೆ ಬಳಸಬೇಕಾದ ಪಾವತಿ ಎಂದಾದರೂ, ಯಾವುದೇ ನಿರ್ಧಾರವು ಸಾರ್ವಜನಿಕ ಚರ್ಚೆ, ಪಾರದರ್ಶಕತೆ ಮತ್ತು ಹಂತ ಹಂತವಾಗಿ ಜಾರಿಗೆ ಬರಬೇಕಿತ್ತು. ಪ್ರಸ್ತುತ ನಿರ್ಧಾರವು ಜನಸಾಮಾನ್ಯರ ಮೇಲೆ ಆರ್ಥಿಕ ಒತ್ತಡ ಹೆಚ್ಚಿಸಿದಂತಾಗಿದೆ. ನಗರಸಭೆ ಅಧಿಕಾರಿಗಳು ಹಾಗೂ ಉನ್ನತಾಧಿಕಾರಿಗಳು ತೆರಿಗೆ ಏರಿಕೆಯನ್ನು ಪುನರ್ ಪರಿಶೀಲನೆ ಮಾಡಬೇಕು. ಜನತೆಗೆ ಮೂಲಭೂತ ಸೌಕರ್ಯ, ಅಭಿವೃದ್ಧಿ, ಸೇವಾ ಗುಣಮಟ್ಟ ಸುಧಾರಣೆಗೊಳಿಸಿ, ನಾಗರೀಕರ ಧ್ವನಿಗೆ ನಗರಸಭೆ ಕಿವಿಗೊಡಬೇಕು ಎಂದು ಜನರು ಒತ್ತಾಯಿಸಿದ್ದಾರೆ.



> ನಗರದ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಸೂಚನೆಯಂತೆ ತೆರಿಗೆ ಏರಿಕೆ ಅನಿವಾರ್ಯ. ಸರ್ಕಾರದ ಆದೇಶದಂತೆ ತೆರಿಗೆ ಏರಿಸಲಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ತಕ್ಕಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಜನರಿಗೆ ಮಾಹಿತಿ ನೀಡುವುದು ತಡವಾಗಿದೆ. ಶೀಘ್ರದಲ್ಲೆ ಮಾಹಿತಿ ನೀಡಲಾಗುವುದು.
>
> **– ರೂಪೇಶ್ ಕುಮಾರ್**
> ಅಧ್ಯಕ್ಷರು, ನಗರಸಭೆ ಹೊಸಪೇಟೆ.

> ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರ ಸುತ್ತೋಲೆಯನುಸಾರ ಪ್ರತಿ ಆರ್ಥಿಕ ವರ್ಷದ ಆರಂಭದಲ್ಲಿ ನಗರಸಭೆ ವ್ಯಾಪ್ತಿಯ ಆಸ್ತಿ ತೆರಿಗೆಯನ್ನು ಶೇ.3 ರಿಂದ ಶೇ.5ರವರೆಗೆ ಏರಿಕೆ ಮಾಡಲಾಗಿದೆ. ಖಾಲಿ ನಿವೇಶನಕ್ಕೆ ಶೇ.3, ವಸತಿಗೆ ಶೇ.4ರಷ್ಟು, ವಾಣಿಜ್ಯ-ಕೈಗಾರಿಕೆಗಳಿಗೆ ಶೇ.5 ರಷ್ಟು ತೆರಿಗೆ ಹೆಚ್ಚಿಸಲಾಗಿದೆ. ಸಾರ್ವಜನಿಕರಿಗೆ ಮಾಹಿತಿ ನೀಡಲಾಗುವುದು.
>
> **– ಚಂದ್ರಪ್ಪ** ಪೌರಾಯುಕ್ತರು,
> ನಗರಸಭೆ ಹೊಸಪೇಟೆ

> ತೆರಿಗೆ ಏರಿಕೆ ಜನಸಾಮಾನ್ಯರ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಜನಪ್ರತಿನಿಧಿಗಳಿಗೆ, ನೌಕರರಿಗೆ ವೇತನಗಳು ಹೆಚ್ಚಾದಂತೆ ಜನಸಾಮಾನ್ಯರಿಗೆ ಕೂಲಿ ಏರುವುದಿಲ್ಲ, ವೇತನಗಳು ಹೆಚ್ಚಿಸಿದ ನಂತರ ತೆರಿಗೆ, ಅಗತ್ಯ ವಸ್ತುಗಳ ಬೆಲೆಗಳನ್ನು ಸರ್ಕಾರಗಳು ಏರಿಸುತ್ತಾ ಬಂದಿವೆ. ವೇತನ ಪಡೆಯುವವರ ಮೇಲೆಯೂ ಇದು ತಕ್ಕಮಟ್ಟಿಗೆ ಪರಿಣಾಮ ಬೀರಿದರೂ, ಜನಸಾಮಾನ್ಯರ ಬದುಕಿನ ಮೇಲೆ ಗದಪ್ರಹಾರವಾಗಲಿದೆ ಎಂಬುದನ್ನು ಸರ್ಕಾರ ಅರಿಯಬೇಕು. ಕೂಲಿ ಕಾರ್ಮಿಕರಿಗೆ ಯಾವುದೇ ನಿಖರ ವೇತನಗಳು ಇರುವುದಿಲ್ಲ. ತೆರಿಗೆ ವಿಧಿಸುವಾಗಲು ಸರ್ಕಾರ ಯೋಚಿಸಿ ಸಾಮಾನ್ಯ ಜನರಿಗೆ ಹೊರಯಾಗದಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ನಿರುದ್ಯೋಗದ ಸಮಸ್ಯೆಯಿಂದ ಬಳಲುತ್ತಿರುವವರು ಸ್ವಾಭಿಮಾನ ಬದುಕು ಕಟ್ಟಿಕೊಳ್ಳಲು ಸಣ್ಣಪುಟ್ಟ ವ್ಯಾಪರ ಮಾಡುತ್ತಿದ್ದಾರೆ. ಆಸ್ತಿ ತೆರಿಗೆ ಏರಿಕೆಯಿಂದ ಬಾಡಿಗೆ ಏರುವ ಆತಂಕ ವ್ಯಾಪರಸ್ಥರದ್ದಾಗಿದೆ. ಬಾಡಿಗೆ ಕಟ್ಟಲಾಗದೆ ಅಂಗಡಿಗಳನ್ನು ಮುಚ್ಚಿ ಮನೆ ಸೇರಿದರೆ ಕುಟುಂಬ ನಿರ್ವಹಣೆ ಪ್ರಶ್ನೆ ಎದುರಾಗಲಿದೆ. ತೆರಿಗೆ ಏರಿಸುವಲ್ಲಿ ನಗರಸಭೆ ತೋರುವ ಕಾಳಜಿ, ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲೂ ತೋರಬೇಕು. ತೆರಿಗೆ ಪಾವತಿಸಿಯೂ ಮೂಲಭೂತ ಸೌಲಭ್ಯಕ್ಕಾಗಿ ಕಚೇರಿಗೆ ಅಲೆದಾಡಿಸುವುದನ್ನು ನೋಡಿದರೆ ತೆರಿಗೆ ಕಟ್ಟಬೇಕೇ ಎಂಬ ಪ್ರಶ್ನೆ ಜನರನ್ನು ಕಾಡುವುದು ತಪ್ಪುತ್ತಿಲ್ಲ.
>
> **– ನವೀನ್‌ಕುಮಾರ್** ಜಿಲ್ಲಾಧ್ಯಕ್ಷರು,
> ಬೀದಿ ಬದಿ ವ್ಯಾಪರಿಗಳ ಸಂಘ, ವಿಜಯನಗರ.

## ಗ್ರಾಪಂ ಉಪಚುನಾವಣೆಗೆ ಚುನಾವಣಾಧಿಕಾರಿಗಳ ನೇಮಕ : ಜಿಲ್ಲಾಧಿಕಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಹರಪನಹಳ್ಳಿ, ಕೂಡ್ಲಿಗಿ, ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಡೆಸಲು ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಹರಪನಹಳ್ಳಿ ತಾಲೂಕಿನ ಕುಂಚೂರು ಗ್ರಾಪಂಗೆ ಚುನಾವಣಾಧಿಕಾರಿಯಾಗಿ ಶರ್ಮತ್ ಐ ಕಣದಮನಿ, ಸಹಾಯಕರಾಗಿ ಲಚಮಾನಾಯ್ಕ.ಎಲ್, ಕೂಡ್ಲಿಗಿ ತಾಲೂಕಿನ ಗುಂಡುಮುಣುಗು ಗ್ರಾಪಂಗೆ ಚುನಾವಣಾಧಿಕಾರಿಯಾಗಿ ಗೋವಿಂದಪ್ಪ, ಸಹಾಯಕರಾಗಿ ಮಂಜುನಾಥ, ಹಡಗಲಿ ತಾಲೂಕಿನ ಇಟ್ಟಿಗಿ ಗ್ರಾಪಂಗೆ ಚುನಾವಣಾಧಿಕಾರಿಯಾಗಿ ಪ್ರದೀಪ್.ಕೆ, ಸಹಾಯಕರಾಗಿ ಎಂ.ಮಂಜುನಾಥ, ಹಗರಿ ಬೊಮ್ಮನಹಳ್ಳಿ ತಾಲೂಕಿನ ಮಾಲವಿ ಗ್ರಾಪಂಗೆ ಎಂ.ಎಸ್.ಗುರುಬಸವರಾಜ, ಶಿವಲಿಂಗಸ್ವಾಮಿ.ಎನ್.ವಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಬಾಚಿಗೊಂಡನಹಳ್ಳಿ ಗ್ರಾಪಂಗೆ ಅಕ್ಕಿಬಸವರಾಜ, ಡಿ.ರೇವಪ್ಪ ಇವರುಗಳನ್ನು ನೇಮಕ ಮಾಡಿ ಆದೇಶಿಸಲಾಗಿದೆ.




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances. Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com

# ಸ್ಕೌಟ್ಸ್ ಅಂಡ್ ಗೈಡ್ಸ್ : ಜೀವನೋತ್ಸಹ



ಗೈಡ್ ಎಂಬುದು ಕೇವಲ ಒಂದು ಗುಂಪಲ್ಲ.... ನಿರಂತರ ಕಲಿಕೆಯ ಸಾಹಸಮಯ ಮತ್ತು ಸೇವಾ ಮನೋಭಾವವನ್ನು ನಮ್ಮಲ್ಲಿ ತುಂಬುವ ಪಯಣ. ಸ್ಕೌಟ್ಸ್ ಇಲ್ಲವೇ ಗೈಡ್ ನಲ್ಲಿ ಮಕ್ಕಳನ್ನು ಭರ್ತಿ ಮಾಡಿಕೊಂಡಾಗ ಅವರಲ್ಲಿ ಕ್ರಿಯಾಶೀಲ ಚಟುವಟಿಕೆಗಳು, ಕ್ಯಾಂಪುಗಳಲ್ಲಿ ಪ್ರತಿದಿನ ಕವಾಯತುಗಳು ಬೇರೆಯವರಿಗೆ ಸಹಾಯ ಮಾಡುವುದು ಮತ್ತು ನಿಗದಿತ ದೈನಂದಿನ ಕಾರ್ಯಕ್ರಮಗಳು ನಮಗೆ ದೊರೆಯುತ್ತವೆ.

ಸ್ಕೌಟ್ಸ್ ಅಂಡ್ ಗೈಡ್ಸ್ ನ ಪಯಣದ ಆರಂಭದಲ್ಲಿ ನಾವು ನಮಗೆ ಸಾಧ್ಯವಿದ್ದಷ್ಟು ನಿಯಮಗಳನ್ನು ಪಾಲಿಸಿ ಇತರರಿಗೆ ಸಹಾಯ ಮಾಡುವ ಪ್ರತಿಜ್ಞೆಯನ್ನು ಮಾಡಬೇಕಾಗುತ್ತದೆ.

ಸ್ಕೌಟ್ಸ್ ಮತ್ತು ಗೈಡ್ ನಲ್ಲಿ ಪ್ರಾರಂಭಿಕ ಹಂತವನ್ನು ಪ್ರವೇಶ ಎಂಬ ಹೆಸರಿನಲ್ಲಿ ಆರಂಭಿಸುತ್ತಾರೆ. ನೈಜ ಜೀವನದ ವಿವಿಧ ಘಟನೆಗಳಿಗೆ ನಮ್ಮನ್ನು ನಾವು ತೆರೆದುಕೊಳ್ಳುವ ಮತ್ತು ಹೊಸ ಹೊಸ ಕೌಶಲಗಳನ್ನು ಕಲಿಯುವ ರೀತಿಯಲ್ಲಿ ನಮಗೆ ತರಬೇತಿ ನೀಡಲಾಗುತ್ತದೆ.

## ವಿವಿಧ ಹಂತಗಳ ಪೂರೈಸುವುದು

ತರಗತಿಗಳಲ್ಲಿ ಪಾಸಾಗಿ ಮುಂದೆ ಹೋಗುವಂತೆ ಗೈಡ ನಲ್ಲಿಯೂ ಕೂಡ ಹಲವಾರು ಹಂತಗಳನ್ನು ಪೂರೈಸಲೇಬೇಕಾಗುತ್ತದೆ.

**1.ಪ್ರಥಮ ಸೋಪಾನ....**
ಮೂಲಭೂತವಾದ ರಕ್ಷಣಾ ಕ್ರಮಗಳು, ಪ್ರಥಮ ಚಿಕಿತ್ಸೆ ಮತ್ತು ಸಮೂಹವಾಗಿ ಕಾರ್ಯನಿರ್ವಹಿಸುವುದು.

**2.ದ್ವಿತೀಯ ಸೋಪಾನ...**
ಹೆಚ್ಚು ಹೊರಾಂಗಣ ಕೌಶಲಗಳು, ಅಡುಗೆ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವುದು.

**3.ತೃತೀಯ ಸೋಪಾನ...**
ನಾಯಕತ್ವ ತರಬೇತಿ ಮತ್ತು ಸಮುದಾಯ ಸೇವೆ

**4. ಅಂತಿಮವಾಗಿ ರಾಜ್ಯ ಪುರಸ್ಕಾರ....**
ರಾಜ್ಯಮಟ್ಟದ ಸ್ಕೌಟ್ಸ್ ಅಂಡ್ ಗೈಡ್ಸ್ ನಲ್ಲಿ ಅದ್ವಿತೀಯ ಕಾರ್ಯ ನಿರ್ವಹಿಸಿದವರಿಗೆ

**5. ಪ್ರೆಸಿಡೆಂಟ್ ಪುರಸ್ಕಾರ....**
ಅತ್ಯುತ್ತಮ ವಿದ್ಯಾರ್ಥಿಗೆ ನೀಡಲ್ಪಡುವ ಅತಿ ದೊಡ್ಡ ಗೌರವ ಪುರಸ್ಕಾರ.

ಪ್ರತಿಯೊಂದು ಹಂತವು ನಮಗೆ ಸ್ವತಂತ್ರ್ಯವಾಗಿ ತೊಂದರೆಗಳನ್ನು ನಿವಾರಿಸಿಕೊಳ್ಳುವ ಮತ್ತು ಬೇರೆಯವರ ತೊಂದರೆಗಳನ್ನು ಕೂಡ ನಿರ್ವಹಿಸುವ ಕೌಶಲ್ಯಗಳನ್ನು ಕಲಿಸಿಕೊಡುತ್ತದೆ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

## ಕ್ಯಾಂಪ್ ಗಳು.. ಜೀವನದ ನಿಜವಾದ ಅನುಭವಗಳು

ಸ್ಕೌಟ್ಸ್ ಅಂಡ್ ಗೈಡ್ಸ್ ಗಳು ಕೇವಲ ಪುಸ್ತಕದಲ್ಲಿ ಓದುವುದಲ್ಲ ಕ್ಯಾಂಪ್ ಗಳಲ್ಲಿ ತರಬೇತಿ ಪಡೆದು ಅನುಭವಿಸುವುದು.

ಕಾಡಿನಲ್ಲಿ ನಮ್ಮ ಟೆಂಟುಗಳನ್ನು ನಾವೇ ನಿರ್ಮಿಸಿಕೊಂಡು ಆಹಾರ ತಯಾರಿಸುವುದು.

ನಕಾಶೆ ಮತ್ತು ದಿಕ್ಸೂಚಿಯ ಸಹಾಯದಿಂದ ನಿಗದಿತ ಸ್ಥಳವನ್ನು ತಲುಪುವ ಕಲಿಕೆ.ನಿಗದಿತ ಎತ್ತರಗಳನ್ನು ಚಾರಣದ ಮೂಲಕ ಗುಂಪಿನಲ್ಲಿ ಸಾಗಿ ತಲುಪುವುದು.

ಕೆಲ ಕ್ಯಾಂಪ್ಗಳು ಚಿಕ್ಕದಾಗಿರುತ್ತದೆ ಮತ್ತೆ ಕೆಲ ಕ್ಯಾಂಪ್‌ಗಳು, ರಾಷ್ಟ್ರ ಮಟ್ಟದ ಜಾಂಬೂರಿಗಳು ಸಾವಿರಾರು ಜನ ವಿದ್ಯಾರ್ಥಿಗಳನ್ನು ಒಂದೇ ಸೂರಿನಡಿ ತರಬೇತಿ ಪಡೆಯುವಂತೆ ಆಯೋಜಿಸಲ್ಪಟ್ಟಿರುತ್ತವೆ ಕ್ಯಾಂಪ್ನ ಉದ್ದೇಶ.....ಬೇರೆಯವರಿಗೆ ಸಹಾಯ ಮಾಡುವುದು ನಿಜವಾದ ಉದ್ದೇಶ ಸ್ಕೌಟ್ಸ್ ಅಂಡ್ ಗೈಡ್ ನಲ್ಲಿ ತರಬೇತಿಯಾದ ವಿದ್ಯಾರ್ಥಿಗಳು ರಾಷ್ಟ್ರೀಯ ವಿಪತ್ತು ನಿರ್ವಹಣೆಯಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ದುರಂತದ ಸಮಯದಲ್ಲಿ ಆಹಾರ, ನೀರು ಮತ್ತುಪ್ರಥಮಚಿಕಿತ್ಸೆಯನ್ನುನೀಡಲುಇವರುತರಬೇತಿಗೊಂಡಿರುತ್ತಾರೆ.

ಒಂದೊಂದು ಕ್ಯಾಂಪಿನಲ್ಲಿ ಸಾಕಷ್ಟು ಜನರಿದ್ದರೂ ಕೂಡ ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ಇವರು ಉಳಿದವರಿಗೆ ಕೂಡ ಸ್ವಚ್ಛತೆಯ ಅರಿವನ್ನು ಮೂಡಿಸುತ್ತಾರೆ.

ಹಿರಿಯ ಅಧಿಕಾರಿಗಳಿಂದ ಆದೇಶ ಬರುವವರೆಗೆ ಕಾಯದೆ ಅವಶ್ಯಕತೆ ಇದ್ದಾಗ ಸಹಾಯ ಮಾಡುವುದು ಸ್ಕೌಟ್ಸ್ ಅಂಡ್ ಗೈಡ್ಸ್ ನ ವಿದ್ಯಾರ್ಥಿಗಳ ಮುಖ್ಯ ಕರ್ತವ್ಯವಾಗಿರುತ್ತದೆ

ದೈಹಿಕವಾಗಿ ಬಲಿಷ್ಠನಾಗಿರುವುದು ಶಕ್ತಿಯ ಸಂಕೇತವಲ್ಲ ಬದಲಾಗಿ ದಯಾಳುತನ ಮತ್ತು ಜವಾಬ್ದಾರಿಯತವಾಗಿರುವುದು ಶಕ್ತಿ ಎಂಬುದು ಸ್ಕೌಟ್ಸ್ ಅಂಡ್ ಗೈಡ್ಸ್ ನ ಧ್ಯೇಯವಾಗಿದೆ

ಸ್ಕೌಟ್ಸ್ ಅಂಡ್ ಗೈಡ್ಸ್ ಮಾರ್ಗದರ್ಶಿಯು ವಿದ್ಯಾರ್ಥಿಗಳು ನಿಯಮಗಳನ್ನು ಪರಿಪಾಲಿಸುತ್ತಾ ತಮ್ಮ ಉನ್ನತ ವ್ಯಕ್ತಿತ್ವ ನಿರ್ಮಾಣದ ಬೃಹತ್ ಪ್ರಕ್ರಿಯೆ.

ಸೆಲ್ಯೂಟ್ ಹೊಡೆಯುವುದು ಗೌರವವನ್ನು ಸೂಚಿಸಿದರೆ ಸಮವಸ್ತ್ರವು ಏಕತೆಯನ್ನು ಸೂಚಿಸುತ್ತದೆ.

ಸ್ಕೌಟ್ಸ್ ಅಂಡ್ ಗೈಡ್ನ ಕಾಯ್ದೆಗಳು ಗೌರವ ನಂಬಿಕೆ ಮತ್ತು ದಯೆಗಳನ್ನು ಚಿಕ್ಕಂದಿನಿಂದಲೇ ಮಕ್ಕಳು ಅಳವಡಿಸಿಕೊಳ್ಳಲು ಕಲಿಸುತ್ತದೆ

ಸ್ಕೌಟ್ಸ್ ಅಂಡ್ ಗೈಡ್ಸ್ ನಲ್ಲಿ ವಿದ್ಯಾರ್ಥಿಗಳು ಅಳವಡಿಸಿಕೊಳ್ಳುವ ಶಿಸ್ತು ಮತ್ತು ಜವಾಬ್ದಾರಿಗಳು ಅವರು ಉನ್ನತ ವ್ಯಕ್ತಿತ್ವವನ್ನು ಹೊಂದಲು ಕಾರಣವಾಗುತ್ತದೆ.

ಸ್ಕೌಟ್ಸ್ ಅಂಡ್ ಗೈಡ್ ತರಬೇತಿಯು ಒಂದು ಜೀವಮಾನದ ಕಲಿಕೆಯಾಗಿದೆ

ಕಾಲಾಂತರದಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ತರಬೇತಿ ಪಡೆದವರು ಸ್ವತಂತ್ರ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ. ಮತ್ತೆ ಕೆಲವರು ತರಬೇತಿಯನ್ನು ಮುಂದುವರಿಸಿ ರೋವರ್ಸ್ ಮತ್ತು ರೇಂಜರ್ಸ್ ಗಳಾಗುತ್ತಾರೆ... ಉಳಿದವರು ತಾವು ಕಲಿತ ಮೌಲ್ಯಗಳನ್ನು ಬದುಕಿನಲ್ಲಿ, ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯುತ್ತಾರೆ

ಪ್ರಾರಂಭದಲ್ಲಿ ಒಂದು ಕ್ರಿಯೆಯ ಮೂಲಕ ಆರಂಭವಾಗುವ ಸ್ಕೌಟ್ಸ್ ಅಂಡ್ ಗೈಡ್ ಪಯಣವು ಜೀವನೋತ್ಸಾಹವನ್ನು ಹೆಚ್ಚಿಸುವ ಬದುಕಿನ ಕೊನೆಯವರೆಗೂ ನಮ್ಮೊಂದಿಗೆ ಇರುವ ಮುಗಿಯದ ಪಯಣವಾಗಿರುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ಮಹಾವೀರ ಜನ್ಮ ಕಲ್ಯಾಣಕ್



ನಮ್ಮ ದೇಶವು ವಿವಿಧತೆಯಿಂದ ಕೂಡಿರುವ ದೇಶ. ಇಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಸಾಧನೆ ಮಾಡಿ ಆದರ್ಶ ವ್ಯಕ್ತಿಯಾಗಿ ಹೊರಹೊಮ್ಮಿ ಮಹಾಪುರುಷರಾಗಿದ್ದಾರೆ. ಅವರ ಜೀವನವನ್ನು ಮಾರ್ಗದರ್ಶನವಾಗಿಟ್ಟುಕೊಂಡು, ಅವರು ಮಾಡಿದ ಸಾಧನೆಗಳನ್ನು ನೆನೆಯುವ ಸಲುವಾಗಿ ಹಾಗೂ ಮಹಾಪುರುಷರಿಗೆ ಗೌರವ ಸಮರ್ಪಿಸುವ ದೃಷ್ಟಿಯಿಂದ ಮಹಾತ್ಮರ ಜಯಂತಿಯನ್ನು ನಮ್ಮ ದೇಶದಲ್ಲಿ ಆಚರಿಸಲಾಗುತ್ತದೆ.

ಮಹಾವೀರ ಜಯಂತಿಯನ್ನು ಜಗತ್ತಿನಾದ್ಯಂತ ಜೈನರು ಬಹಳ ಶ್ರದ್ಧೆಯಿಂದ ಆಚರಿಸುತ್ತಾರೆ. ಈ ಶುಭದಿನದಂದು ಜೈನ ಧರ್ಮೀಯರು ರಥಯಾತ್ರೆಯನ್ನು ಮಾಡುತ್ತಾ ದೇವಾಲಯಗಳು ಭೇಟಿ ನೀಡಿ ಬಡವರಿಗೆ ಕಾಣಿಕೆ ನೀಡುತ್ತಾ, ಧ್ಯಾನ ಮಾಡುತ್ತಾ, ಮಹಾವೀರರ ಸ್ತುತಿ ಸ್ತೋತ್ರಗಳನ್ನು ಪಠಿಸುವ ಮೂಲಕ, ಮಹಾವೀರರ ಜಯಂತಿಯನ್ನು ಆಚರಿಸುತ್ತಾರೆ. ಯಾವುದೇ ಜೀವಿಗಳಿಗೂ ಸ್ವಲ್ಪವೂ ಹಾನಿಯಾಗದಂತೆ ವಿಶ್ವದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡುವುದೇ ಜೈನ ಧರ್ಮದ ಮುಖ್ಯ ಸಿದ್ಧಾಂತ.

ಜೈನ ಧರ್ಮದ 24 ನೇ ಹಾಗೂ ಕೊನೆಯ ತೀರ್ಥಂಕರದ ಭಗವಾನ್ ಮಹಾವೀರರ ಜನ್ಮದಿನವನ್ನು ಮಹಾವೀರ ಜಯಂತಿ ಎಂದು ಆಚರಿಸಲಾಗುತ್ತದೆ. ಜೈನ ಧರ್ಮದ ಅನುಯಾಯಿಗಳಿಗೆ ಮಹಾವೀರ ಜಯಂತಿಯು ಬಹಳ ವಿಶೇಷವಾದ ಹಬ್ಬ. ಪ್ರತಿ ವರ್ಷ ಚೈತ್ರ ಮಾಸ ಶುಕ್ಲ ಪಕ್ಷದ ತ್ರಯೋದಶಿ(ಚೈತ್ರ ಮಾಸದ 13ನೇ ದಿನ) ದಿನದಂದು ಮಹಾವೀರ ಜಯಂತಿಯನ್ನು ಆಚರಿಸಲಾಗುತ್ತದೆ. ಈ ದಿನವನ್ನು ಮಹಾವೀರ ಜನ್ಮ ಕಲ್ಯಾಣಕ್ ಎಂದು ಕರೆಯಲಾಗುತ್ತದೆ.

ಭಗವಾನ್ ಮಹಾವೀರರು ಕ್ರಿಸ್ತಪೂರ್ವ 599 ರಲ್ಲಿ ಬಿಹಾರದ ವೈಶಾಲಿ ಜಿಲ್ಲೆಯ ಕುಂದ ಗ್ರಾಮದಲ್ಲಿ ರಾಜ ಸಿದ್ಧಾರ್ಥ ಹಾಗೂ ರಾಣಿ ತ್ರಿಶೂಲ ರವರ ಸುಪುತ್ರನಾಗಿ ಜನಿಸಿದರು. ಇವರು ಇಕ್ವಾಂಕು ವಂಶಕ್ಕೆ ಸೇರಿದವರು. ಇವರ ಬಾಲ್ಯದ ಹೆಸರು ವರ್ಧಮಾನ್. ಇವರು ಜೈನ ಧರ್ಮದ ಮೂಲತತ್ವಗಳನ್ನು ಪ್ರತಿಪಾದಿಸಿದರು. ತಮ್ಮ 30ನೇ ವಯಸ್ಸಿನಲ್ಲಿ ಸಿಂಹಾಸನವನ್ನು ತ್ಯಜಿಸಿ, ಆಂತರಿಕ ಶಾಂತಿ ಮತ್ತು ಜ್ಞಾನೋದಯವನ್ನು ಪಡೆಯಲು ರಾಜ್ಯ ಕುಟುಂಬ ಹಾಗೂ ಲೌಕಿಕ ಕರ್ತವ್ಯಗಳನ್ನು ತೊರೆದು ಆಧ್ಯಾತ್ಮಿಕ ಮಾರ್ಗವನ್ನು ಆರಿಸಿಕೊಂಡರು. ಅವರು ಅಶೋಕ ವೃಕ್ಷದ ಕೆಳಗೆ 12 ವರ್ಷಗಳ ಕಾಲ ಧ್ಯಾನ ಮಾಡಿದ ನಂತರ ಆರು ದಿನಗಳ ಕಾಲ ಉಪವಾಸದಲ್ಲಿ ಧ್ಯಾನರೂಢನಾಗಿದ್ದಾಗ ಮಹಾವೀರರಿಗೆ ಮೋಹಾವರಣಗಳು ಕಳಚಿ ಸರ್ವಜ್ಞ ತತ್ವ ಅಥವಾ ಕೇವಲ ಜ್ಞಾನ ಸಿದ್ಧಿಸಿತು. ಇದರಿಂದ ಸಂತುಷ್ಟರಾದ ಇಂದ್ರಾದಿ ದೇವತೆಗಳು ಪೂಜೆ ಸಲ್ಲಿಸಿದರು. ಇದನ್ನೇ ಕೇವಲ ಜ್ಞಾನ ಕಲ್ಯಾಣ ಎಂದು ಕರೆಯಲಾಯಿತು.


ಕಠಿಣ ತಪಸ್ಸು ಮಾಡಿ ಇಂದ್ರಿಯ ಹಾಗೂ ಮನಸ್ಸಿನಲ್ಲಿ ಮೂಡುವ ಭಾವನೆಗಳ ಮೇಲೆ ಸಂಪೂರ್ಣ ಹಿಡಿತ ಹೊಂದಿದವರನ್ನು ತೀರ್ಥಂಕರರು ಎಂದು ಕರೆಯಲಾಗುತ್ತದೆ. ದಂತ ಕಥೆಗಳ ಪ್ರಕಾರ ಮಹಾವೀರರು ಜೈನ ಧರ್ಮದ 24ನೇ ತೀರ್ಥಂಕರರು ಎಂದು ಹೇಳಲಾಗುತ್ತದೆ.

ಸಾಮಾನ್ಯ ಜೀವನವನ್ನು ತೊರೆದು ಆಧ್ಯಾತ್ಮಿಕತೆಯ ಮಾರ್ಗವನ್ನು ಅಳವಡಿಸಿಕೊಂಡ ಭಗವಾನ್ ಮಹಾವೀರರು ತಮ್ಮ ಜೀವನದ ಉದ್ದಗಲಕ್ಕೂ ಮಾನವ ಕುಲವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಮಾರ್ಗವನ್ನು ತೋರಿಸಿದರು. ಮಹಾವೀರರು ಸಮಾಜ ಮತ್ತು ಜನರ ಒಳಿತಿಗಾಗಿ ಅನೇಕ ಸಂದೇಶ ತತ್ವಗಳನ್ನು ಸಾರಿದ್ದಾರೆ. ಅವರು ಮೋಕ್ಷವನ್ನು ಪಡೆಯಲು ಜನರಿಗೆ ಐದು ತತ್ವಗಳನ್ನು ಬೋಧಿಸಿದ್ದಾರೆ ಅದನ್ನು ಪಂಚಸಿದ್ಧಾಂತ ಮತ್ತು ಪಂಚಶೀಲ ತತ್ವ ಎಂದು ಕರೆಯಲಾಗುತ್ತದೆ.

ಮಹಾವೀರರು ಸೂಚಿಸಿದ ಐದು ಪಂಚಶೀಲ ತತ್ವಗಳೆಂದರೆ ಸತ್ಯ, ಅಹಿಂಸೆ, ಅಸ್ತೆಯಾ (ಕದಿಯದಿರುವುದು) ಅಪರಿಗ್ರಹ (ಮೋಹವನ್ನು ಜಯಿಸುವುದು) ಮತ್ತು ಬ್ರಹ್ಮಚರ್ಯವನ್ನು ಅನುಸರಿಸುವುದು. ಇವರ ಬೋಧನೆಯ ನಂತರ ಜೈನ ಧರ್ಮವು ಹೆಚ್ಚು ಹೆಚ್ಚು ಜನರಿಗೆ ಆಪ್ತವಾಯಿತು. ವಿವಿಧ ಧರ್ಮದ ಸಂತ ಶ್ರೇಷ್ಠರಂತೆ ಮಹಾವೀರರ ಬಾಲ್ಯದಲ್ಲಿಯೇ ಹಲವಾರು ಪವಾಡಗಳು ನಡೆದಿದೆ ಎಂಬ ಉಲ್ಲೇಖವಿದೆ.

ಸಂಜಯ ಮತ್ತು ವಿಜಯ ಎಂಬ ಚಾರುಣ ಮುನಿಗಳು ಕೆಲವು ತಾತ್ವಿಕ ವಿಷಯದಲ್ಲಿ ಗೊಂದಲಕ್ಕೀಡಾಗಿದ್ದರು. ಆಗ ಅವರು, ಅವರ ದಿವ್ಯಶಕ್ತಿಯಿಂದ ವರ್ಧಮಾನನ ಜನ್ಮ ವೃತ್ತಾಂತವನ್ನು ತಿಳಿದು ಕುಂದ ಗ್ರಾಮಕ್ಕೆ ಪಯಣ ಬೆಳೆಸಿದರು. ಅಲ್ಲಿ ವರ್ಧಮಾನನ ದರ್ಶನವನ್ನು ಮಾಡಿದ ಕೂಡಲೇ ಅವರ ಮನದಲ್ಲಿ ಮೂಡಿದ ಸಂದೇಹಗಳು ದೂರವಾಗಿ ಸುಪ್ರೀತರಾದರು. ನಂತರ ಆ ಮನೆಗಳು ವರ್ಧಮಾನನಿಗೆ "ಸನ್ಮತಿ" ಎಂದು ಕರೆದು ಗೌರವಿಸಿದರು.

ಇನ್ನೊಂದು ಕಥೆಯ ಪ್ರಕಾರ ಒಮ್ಮೆ ಇಂದ್ರ ಸಭೆಯಲ್ಲಿ ಲೋಕದಲ್ಲಿ ಅತ್ಯಂತ ವೀರನಾದವನು ಯಾರೆಂಬ ಚರ್ಚೆ ನಡೆಯಿತಂತೆ. ಆಗ



ದೇವೇಂದ್ರನು ವರ್ಧಮಾನನ ಹೆಸರನ್ನು ಸೂಚಿಸಿದನಂತೆ. ಇದನ್ನು ಪರೀಕ್ಷಿಸಲು ಸಂಗಮನೆಂಬ ದೇವ ಪುರುಷನು ವರ್ಧಮಾನ ಹಾಗೂ ಅವನ ಸ್ನೇಹಿತರು ಆಟವಾಡುತ್ತಿದ್ದ ಉದ್ಯಾನವನದ ಮರವೊಂದರಲ್ಲಿ ಬೃಹತ್ ಸರ್ಪದ ಅವತಾರ ತಾಳಿ ಅವರನ್ನು ಹೆದರಿಸಿದನಂತೆ. ಆಗ ಇವನ ಸಂಗಡಿಗರೆಲ್ಲರೂ ಹೆದರಿ ಓಡಿ ಹೋದರು ವರ್ಧಮಾನ ಮಾತ್ರ ಆ ಬೃಹತ್ ಸರ್ಪದೊಂದಿಗೆ ಕಾದಾಡಿ ಅದನ್ನು ಮಣಿಸಿದನಂತೆ. ಇವನ ಶೌರ್ಯವನ್ನು ಮೆಚ್ಚಿದ ಸಂಗಮನು ಆತನನ್ನು ಮಹಾವೀರನೆಂದು ಸ್ತುತಿಸಿ ದೇವಲೋಕಕ್ಕೆ ಹಿಂದಿರುಗಿದನೆಂದು ಜೈನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.

ಸಹಾನುಭೂತಿಯ ಹೊಸ ಧರ್ಮವನ್ನು ಜಗತ್ತಿಗೆ ಪರಿಚಯಿಸಿ, ಜೀವನದಲ್ಲಿ ನಿಜವಾದ ಸಂತೋಷವನ್ನು ಕಾಣಬೇಕಾದರೆ ಸತ್ಯ ಅಹಿಂಸೆ ಮತ್ತು ಮೋಹವನ್ನು ತ್ಯಜಿಸಬೇಕು ಹಾಗೆಯೆ ಶಕ್ತಿಯ ಶ್ರೇಷ್ಠ ರೂಪವೇ ಮೌನವೆಂದು ಸಾರಿದ ಜೈನ ಧರ್ಮದ ತೀರ್ಥಂಕರ ಭಗವಾನ್ ಮಹಾವೀರರು ತಮ್ಮ 72ನೇ ವಯಸ್ಸಿನಲ್ಲಿ ಬಿಹಾರದ ಪಾವಪೂರಿಯಲ್ಲಿ ನಿರ್ವಾಣ ಹೊಂದಿದರು.

ಜೈನ ಧರ್ಮದ ಅನುಯಾಯಿಗಳು ಮಹಾವೀರ ಜಯಂತಿ ಎಂದು ಮಹಾವೀರನ ವಿಗ್ರಹವನ್ನು ಮೆರವಣಿಗೆ ಮಾಡಿ ಬಸದಿಗಳಲ್ಲಿ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ, ವಿಶೇಷ ಪೂಜೆಯನ್ನು ಮಾಡಿ ಮಹಾವೀರರ ಬೋಧನೆಗಳನ್ನು ವಿವರಿಸಿತ್ತಾ ಈ ದಿನವನ್ನು ಸಂಭ್ರಮಿಸುತ್ತಾರೆ.

**– ಚೇತನ ಭಾರ್ಗವ, ಬೆಂಗಳೂರು**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಮೇ.10 ರಂದು ಬಸವಣ್ಣ, ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ | ಪೂರ್ವಭಾವಿ ಸಿದ್ಧತಾ ಸಭೆ | ಡಿಸಿ ಎಂ.ಎಸ್.ದಿವಾಕರ್ ಹೇಳಿಕೆ.

# ಮಕ್ಕಳಿಗೆ ವಚನ ಸಾಹಿತ್ಯದ ಅರಿವು ಮೂಡಿಸುವ ಕಾಯಕವಾಗಬೇಕಿದೆ

## ನಗರದ ಸಣ್ಣಕ್ಕಿ ವೀರಭದ್ರೇಶ್ವರ ದೇಗುಲದಿಂದ ಬಸವೇಶ್ವರರ ವೃತ್ತದವರೆಗೆ ಭವ್ಯ ಮೆರವಣಿಗೆ

**ಹಂಪಿ ಟೈಮ್ಸ್ ಹೊಸಪೇಟೆ**

ಏಪ್ರಿಲ್.30 ರಂದು ಬಸವಣ್ಣನವರ ಜಯಂತಿಯನ್ನು ಸರಳವಾಗಿ ಆಚರಿಸಿ, ಮೇ.10 ರಂದು ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಜೊತೆಗೆ ಇಬ್ಬರು ಮಹನೀಯರ ಜಯಂತ್ಯುತ್ಸವನ್ನು ಜಿಲ್ಲಾಡಳಿತದಿಂದ ಅದ್ದೂರಿಯಾಗಿ ಆಯೋಜನೆಗೆ ಸಿದ್ಧತೆ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಶ್ರೀಗುರು ಬಸವೇಶ್ವರರ ಜಯಂತಿ ಹಾಗೂ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿದರು. ಇಂದಿನ ಯುವಪೀಳಿಗೆ ಸೇರಿ ಮಕ್ಕಳಿಗೆ ಬಸವಣ್ಣನವರ ಚಿಂತನೆಗಳು, ತತ್ವಾದರ್ಶಗಳನ್ನು ಅರಿವು ಮೂಡಿಸಲು ವಚನ ಸಾಹಿತ್ಯದ ಪರಿಚಯ ಮಾಡಿಸುವ ಅಗತ್ಯವಿದೆ. ಪಾಲಕರು ನಿತ್ಯ ಮನೆಗಳಲ್ಲಿ ಮಕ್ಕಳಿಗೆ ದಿನಕ್ಕೊಂದು 'ವಚನ ವಾಚನ' ಮಾಡುವ ಮೂಲಕ ಬದುಕಿನ ಮೌಲ್ಯಗಳನ್ನು ತಿಳಿಸುವ ಕೆಲಸವಾಗಬೇಕು. ಬಸವಣ್ಣನವರ ವಚನಗಳಲ್ಲಿನ ಧಾರ್ಮಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳು ಹಾಗೂ ಅಸಮಾನತೆಯ ವಿರುದ್ಧ ವಚನಗಳ ಮೂಲಕ ತಿಳಿಸಿದ ವಿಚಾರಗಳನ್ನು ಪ್ರಸ್ತುತ ಸಮಾಜಕ್ಕೆ ಜಯಂತಿಗಳ ಮೂಲಕ ಜಾಗೃತಿ ಮೂಡಿಸಬೇಕಿದೆ ಎಂದರು.

ಏಪ್ರಿಲ್.30 ರಂದು ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಸರಳವಾಗಿ ಆಚರಿಸಿ ಬಳಿಕ ಶ್ರೀಕೊಟ್ಟೂರೇಶ್ವರ ಮಠದಲ್ಲಿ ಜರುಗುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸುವುದು. ಮೇ.10 ರಂದು ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಹಾಗೂ ಬಸವಣ್ಣನವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸೋಣ. ನಗರದ ಸಣ್ಣಕ್ಕಿ ವೀರಭದ್ರೇಶ್ವರ ದೇಗುಲದಿಂದ ಬಸವೇಶ್ವರರ ವೃತ್ತದವರೆಗೆ ಭವ್ಯ ಮೆರವಣಿಗೆ ನಡೆಸಲಾಗುವುದು ಎಂದರು.

ಸಭೆಯಲ್ಲಿ ಸಹಾಯಕ ಆಯುಕ್ತರಾದ ಪಿ.ವಿವೇಕಾನಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್, ತಹಸೀಲ್ದಾರ ಎಂ.ಶೃತಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

# ಏ.14 ರಂದು ಜಿಲ್ಲಾಡಳಿತದಿಂದ ಅಂಬೇಡ್ಕರ್ ಮತ್ತು ಬಾಬೂಜೀ ಜನ್ಮ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್‌ರವರ 134ನೇ ಹಾಗೂ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಮ್‌ರವರ 118ನೇ ಜನ್ಮ ದಿನಾಚರಣೆ ಸಮಾರಂಭವನ್ನು ಎಪ್ರಿಲ್ 14 ರಂದು, ಬೆಳಗ್ಗೆ 10 ಗಂಟೆಗೆ, ಬೆಳಗ್ಗೆ 11 ಗಂಟೆಗೆ ಜೈ ಭೀಮ್ ವೃತ್ತದಲ್ಲಿ ಪುತ್ಥಳಿಗಳಿಗೆ ಮಾಲಾ ರ್ಪಣೆ ಮಾಡಿ ವೇದಿಕೆ ಕಾರ್ಯಕ್ರಮ ಜರುಗಲಿದೆ.

ಇದಕ್ಕೂ ಮುನ್ನಾ ಬಳ್ಳಾರಿ ರಸ್ತೆಯಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಮೇನ್ ಬಜಾರ್ ಮಾರ್ಗವಾಗಿ ಗಾಂಧಿ ಚೌಕ್, ಬಸ್ ನಿಲ್ದಾಣ, ಜೈಭೀಮ್ ವೃತ್ತದವರೆಗೆ ಭವ್ಯ ಮೆರವಣಿಗೆ ಮಾಡಲಾಗುವುದು. ಕಾರ್ಯಕ್ರಮವನ್ನು ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟನೆ ಮಾಡಲಿದ್ದಾರೆ, ಸಮಾಜ ಕಲ್ಯಾಣಇಲಾಖೆಸಚಿವರಾದಡಾ.ಹೆಚ್.ಸಿ.ಮಹಾದೇವಪ್ಪ ಉಪಸ್ಥಿತರಿರಲಿದ್ದಾರೆ. ಹೊಸಪೇಟೆ ಶಾಸಕರಾದ ಹೆಚ್.ಆರ್‌ಗವಿಯಪ್ಪ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಬಳ್ಳಾರಿ ಸಂಸದ ಈ.ತುಕಾರಾಮ್, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ ನಾಯ್ಕ, ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಹಡಗಲಿ ಶಾಸಕ ಎಲ್.ಕೃಷ್ಣ ನಾಯಕ, ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿ ಕಾರ್ಜುನ, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಶಾಸಕ ಬಿ. ಚಂದ್ರಶೇಖರ್ ಪಾಟೀಲ್, ವಿಧಾನ ಪರಿಷತ್ ಶಾಸಕ ಶಶಿಲ್.ಜಿ.ನಮೋಶಿ, ವಿಧಾನ ಪರಿಷತ್ ಶಾಸಕ ವೈ.ಎಂ.ಸತೀಶ್, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್. ಎನ್.ಎಫ್.ಇಮಾಮ್ ನಿಯಾಜಿ ಭಾಗವಹಿಸಲಿದ್ದಾರೆ.

**ಉಪನ್ಯಾಸ :** ಡಾ.ಬಿ.ಆರ್.ಅಂಬೇಡ್ಕರ್‌ರವರ ಕುರಿತು ಚಳ್ಳಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕರಾದ ಡಾ.ರಾಜಕುಮಾರ್.ಕೆ.ಆರ್.ಜೆ ಹಾಗೂ ಡಾ.ಬಾಬು ಜಗಜೀವನ್ ರಾಮ್ ಕುರಿತು ಡಾ.ಬಾಬು ಜಗಜೀವನ್ ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರು ಸಹ ಪ್ರಾಧ್ಯಾಪಕರಾದ ಡಾ.ತಿಪ್ಪೇಸ್ವಾಮಿ.ಹೆಚ್ ಇವರುಗಳು ಉಪನ್ಯಾಸ ನೀಡಲಿದ್ದಾರೆ.

# ಏ.16–17ರಂದು ಸಿಇಟಿ ಪರೀಕ್ಷೆ

## 6741 ವಿದ್ಯಾರ್ಥಿಗಳಿಗೆ 16 ಪರೀಕ್ಷಾ ಕೇಂದ್ರಗಳು

**ಹಂಪಿ ಟೈಮ್ಸ್ ಚಿತ್ರದುರ್ಗ**

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಏಪ್ರಿಲ್ 16 ಮತ್ತು 17ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಲಿದೆ. ಚಿತ್ರದುರ್ಗ ನಗರದ 16 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಜರುಗಲಿದ್ದು, ಜಿಲ್ಲೆಯಲ್ಲಿ ಒಟ್ಟು 6741 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದು, ಸಿಇಟಿ ಪರೀಕ್ಷೆಯನ್ನು ಸುಗಮವಾಗಿ ನಡೆಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಿಇಟಿ ಪರೀಕ್ಷೆಗಳ ಪೂರ್ವ ಸಿದ್ಧತೆ ಕುರಿತು ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಯಾವುದೇ ಪರೀಕ್ಷಾ ಅವ್ಯವಹಾರ ನಡೆಯದಂತೆ ಸೂಕ್ಷ್ಮವಾಗಿ, ಪಾರದರ್ಶಕವಾಗಿ ಪರೀಕ್ಷೆ ನಡೆಸಬೇಕು. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸುಗಮ ಪರೀಕ್ಷೆ ನಡೆಸಿ, ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟಸ್ವಾಮಿ ಮಾತನಾಡಿ, ಚಿತ್ರದುರ್ಗ ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು, ಹೊಳಲ್ಕೆರೆ ರಸ್ತೆಯ ಎಸ್‌ಜೆಎಂ ಪದವಿಪೂರ್ವ ಕಾಲೇಜು, ಚೈತನ್ಯ ಪಿಯು ಕಾಲೇಜು, ಮಹಾರಾಣಿ ಪಿಯು ಕಾಲೇಜು, ಕಂಪಳರಂಗ ಪಿಯು ಕಾಲೇಜು, ಬೃಹನ್ಮಠ ಪಿಯು ಕಾಲೇಜು, ಪಿ.ಕೆ.ಹಳ್ಳಿಯ ಕೆಎಂಎಸ್ ಪಿಯು ಕಾಲೇಜು, ಡಾನ್‌ಬಾಸ್ಕೋ ಪಿಯು ಕಾಲೇಜು, ಎಸ್‌ಆರ್‌ಎಸ್ ಪಿಯು ಕಾಲೇಜು, ವೆಸ್ಟರ್ನ್ ಹಿಲ್ಸ್ ಪಿಯು ಕಾಲೇಜು, ಎಂ.ಕೆ.ಹಟ್ಟಿ ಎಸ್‌ಜೆಎಂ ಪಿಯು ಕಾಲೇಜು, ಎಸ್‌ಜೆಎಂಐಟಿ, ಸರ್ಕಾರಿ ವಿಜ್ಞಾನ ಕಾಲೇಜು, ಸರ್ಕಾರಿ ಕಲಾ ಕಾಲೇಜು ಹಾಗೂ ನಮ್ಮ ಎಕ್ಸ್‌ಪರ್ಟ್ ಪಿಯು ಕಾಲೇಜು ಸೇರಿದಂತೆ ಒಟ್ಟು 16 ಪರೀಕ್ಷೆ ಕೇಂದ್ರಗಳಿಂದ ಒಟ್ಟು 6741 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಏಪ್ರಿಲ್ 16ರಂದು ಬೆಳಿಗ್ಗೆ 10.30 ರಿಂದ 11.50 ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ರಸಾಯನಶಾಸ್ತ್ರ ಹಾಗೂ ಏಪ್ರಿಲ್ 17ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 11.50 ರವರೆಗೆ ಗಣಿತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ಜೀವಶಾಸ್ತ್ರ ವಿಷಯದ ಪರೀಕ್ಷೆ ನಡೆಯಲಿದೆ. ಜಿಲ್ಲೆಯಲ್ಲಿ ಯಾವುದೇ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಕೇಂದ್ರಗಳು ಇರುವುದಿಲ್ಲ. ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮೊದಲು ಹಾಗೂ ಪರೀಕ್ಷಾ ನಂತರ 30 ನಿಮಿಷಗಳು ಪೊಲೀಸ್ ಬಂದೋಬಸ್ತಿನ ಅವಶ್ಯಕತೆ ಇರುತ್ತದೆ. ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಕೊಂಡ್ಯೊಯುವ ಮತ್ತು ವಿತರಣೆ ಮಾಡುವ ಸಮಯಕ್ಕೆ ಪ್ರತಿ ತಾಲ್ಲೂಕಿನ ಮಾರ್ಗಾಧಿಕಾರಿಗಳ ಜೊತೆಗೆ ಪೊಲೀಸ್ ರಕ್ಷಣೆ ಬೇಕಾಗಿರುತ್ತದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸುವುದು ಮತ್ತು ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಜಿಲ್ಲಾಧಿಕಾರಿಗಳಿಂದ ಘೋಷಿಸುವುದು. ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಮೊಬೈಲ್ ಫೋನುಗಳನ್ನು ತರುವುದು ಹಾಗೂ ಕೈ ಗಡಿಯಾರವನ್ನು ಧರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಉಪನ್ಯಾಸಕರು, ಕಚೇರಿ ಸಿಬ್ಬಂದಿಯವರು ಪರೀಕ್ಷೆ ನಡೆಯುವ ಅವಧಿಯಲ್ಲಿ ಮೊಬೈಲ್ ಫೋನುಗಳನ್ನು ತರುವುದುನ್ನು ಹಾಗೂ ಕೈ ಗಡಿಯಾರ ಧರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಮುಖ್ಯ ಅಧೀಕ್ಷಕರು ಬೇಸಿಕ್ ಸೆಟ್ ಉಪಯೋಗಿಸಲು ಅವಕಾಶ ನೀಡಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪ್ರಶ್ನೆ ಪತ್ರಿಕೆ ತೆರೆಯುವಾಗ ಹಾಗೂ ಉತ್ತರ ಪತ್ರಿಕೆಗಳನ್ನು ಬಂಡಲ್ ಮಾಡುವಾಗ ಸಿಸಿಟಿವಿ ವೀಕ್ಷಣೆಯಡಿಯಲ್ಲಿ ಕಾರ್ಯನಿರ್ವಹಿಸುವುದು ಮತ್ತು ಎಲ್ಲ ಕೊಠಡಿಗಳಿಗೆ ಸಿಸಿಟಿವಿ ಅಳವಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಪನಿರ್ದೇಶಕ ಡಾ.ಮಹೇಶ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಪರೀಕ್ಷಾ ಕೇಂದ್ರಗಳ ಅಧಿಕಾರಿಗಳಿದ್ದರು.

## ಕವಿ ಮನಸು

### ಮದರಂಗಿ

ಮನದ ಭಾವಕೆ ರೂಪ ನೀಡುವುದು
ಮದರಂಗಿ
ನೂರಾಸೆ ಕನಸುಗಳನ್ನು ಕಟ್ಟುವುದು
ಮದರಂಗಿ.

ಬಾಲ್ಯದಲ್ಲಿ ತಾರುಣ್ಯದಲ್ಲಿ ಮದರಂಗಿಯ
ಗುಂಗು,
ಮೂಡುವ ಬಣ್ಣಕ್ಕೆ ಇರುವುದು ಹಲವಾರು
ರಂಗು.

ಬಣ್ಣ ಕೆಂಪಾದರೆ ಸಂತಸ, ನಸು ನಾಚಿಕೆ
ಮೂಡಿ
ಇನಿಯನ ಕುರಿತು ಸಾವಿರ ಹೊಂಗನಸು
ಹೂಡಿ.

ತುಸು ಬಣ್ಣ ಗೆಟ್ಟರೆ ಕನಸೆಲ್ಲವೂ ಮಾಸಿ
ಹೋಗಿ
ಅವ್ಯಕ್ತ ಭಯ ಕಾಡುವುದು ಮನದಿ ನೆಪ
ನೋಡಿ.

ವರುಷ ಕಳೆದಂತೆ ಹೋಗುವುದು ಬಣ್ಣದ
ಆಸಕ್ತಿ,
ಹಚ್ಚಿಕೊಳ್ಳಲು ಕೈ ಕಾಲಿಗೆ ನಿತ್ಯ ಏನೋ
ನಿರಾಸಕ್ತಿ.

ಭಾವಗಳು ಬಣ್ಣ ಕಳೆದುಕೊಂಡು
ನಿಸ್ಸಾರವೆನಿಸಿ,
ಮದರಂಗಿ ಹೊನ್ನ ಬಣ್ಣ ಕೂದಲಲ್ಲಿ
ಪ್ರತಿಫಲಿಸಿ.

ಮದರಂಗಿ ಎಂದೊಡನೆ ನೂರು ನೆನಪು
ಉಕ್ಕಿ,
ಮನದಲ್ಲೇನೋ ಹಲವಾರು ಭಾವ ದಾಳಿ
ಇಕ್ಕಿ.

ಮಾಸದಿರಲಿ ಬಾಳಿನಲಿ ಮದರಂಗಿಯ
ಬಣ್ಣ.
ಮಿನುಗಿತು ಸಾರ್ಥಕತೆ ನಲಿವಿನಲೆಯಲ್ಲಿ
ಕಣ್ಣ.

ಮಮತಾ ಶೃಂಗೇರಿ.
ಕೊಪ್ಪ., ಚಿಕ್ಕಮಗಳೂರು

### ರಕ್ಕಸ ತಂಗಡಿ

ವರ್ಣಿಸಿದಷ್ಟು ಪಸರಿಸುವ ತುಂಗಭದ್ರೆ
ಇತಿಹಾಸಕ್ಕೆ ಮೈಗೊಟ್ಟು ,ಕಿಂಚಿತ್ತು
ಅಲುಗದಿರೋ ಕಲ್ಲುಗಳು
ಏಕಶಿಲಾ ಘನತೇರು, ಸಂಗೀತ ಶಿಲ್ಪದೂರು
ಪಾಳಿಯಲ್ಲಿ ನೋಡಲು ಬರುವ ರವಿ
ಶಶೀಯರು

ನಡೆದ ಕಥೆ ಕೇಳಿ ತತ್ತರಿಸಿದ ಕೈ ಬರೆಯಲು
ರಕ್ಕಸ ತಂಗಡಿಯ ರೌದ್ರತೆಯ
ಅಳಿದದ್ದು ಆಳು, ಉಳಿದದ್ದು ಪಾಳು
ಪ್ರಜ್ಞಾಹೀನಾ ಸ್ಥಿತಿಯಂತೆ ಹಬಲೆಯರ
ಗೋಳು

ಗಂಡೆದೆಯ ಗಂಡುಗಳು ರಕ್ತದ
ಮಡುವಿನಲ್ಲಿ
ಇತ್ತ ಗೆದ್ದ ರಾಜನಿಗೆ, ಸತ್ತ ರಾಜನ
ಹೆಂಡತಿಯೇ ಬೋಗದ ವಸ್ತುವಂತೆ
ರಾಣಿ ವಿಲಾಸಕ್ಕೆ,ರಾಣಿಯೇ ಮೊದಲಾ
ವೇಶ್ಯೆಯೆಂದಾದರೆ
ಇದೆಂಥ ಘೋರ ವಿಕೃತ ಅಮಾನುಷಾ
ಕದನ

ಉತ್ತರಾಧಿಕಾರಿ ಯಾಗುವವಣೆ
ಓಡೋಗಿರುವಾಗ
ಮಹಿಳೆಯರ ಪಾಡು ಕೇಳುವವರ್ಯಾರು
ಅಂದು ಬಂಗಾರದ ಸಂತೆಯಲ್ಲಿ ನಿಂತ,
ಅರೆ ಬೆತ್ತಲೆ ಜೀವಗಳು

ಇದೇನು ಕಳೆದು ಕೊಂಡ
ಹೊನ್ನು – ಮಣ್ಣಿನ ವ್ಯತೆಯಲ್ಲ
ಹತಾಶೆ ಪಂಜರದಿಂದ ನರಳಿ ಬಂದ
ಮಹಾ ಮಾತೆಯರ ಯಶೋಗಾಥೆ.

– ಯರಿಸ್ವಾಮಿ. ಜಿ(ಯಕ್ಷ)
ಹೊಸಪೇಟೆ

### ಮಿಳಿತ

ಜೀವನ ಸುಖ ದುಃಖದ ಮಿಳಿತ
ಹರಿಯುತಲಿದೆ ಭಾವದ ತುಡಿತ
ಜೀವಕೆ ಆಸೆ ವ್ಯಾಮೋಹದ ಸೆಳೆತ
ಮನದಲಿ ಆಲೋಚನೆಗಳ ಮೊರೆತ

ಬದುಕಿನ ಪಯಣದಿ ತಿರುವಿದೆ ಹಲವು
ಆತ್ಮವಿಶ್ವಾಸವಿರೇ ದೊರೆವುದು ನೆರವು
ಪ್ರಯತ್ನವ ಬಿಡದಿರು ಪಡೆಯಲು ಗೆಲುವು
ನಿರಂತರವಿರಲಿ ಉಲ್ಲಾಸದ ಹರಿವು

– ಚೇತನ ಭಾರ್ಗವ, ಬೆಂಗಳೂರು

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.




ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ನಿತ್ಯ ಪಂಚಾಂಗ

ಮಾಸ: ಚೈತ್ರ | ಸಂವತ್ಸರ: ವಿಶ್ವಾವಸು

**10–04–2025 – ಗುರುವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂ.ಫಾಲ್ಗುಣಿ |
| ಯೋಗ | : ವೃದ್ಧಿ |
| ಕರಣ | : ಕೌಳವ |
| ಸೂರ್ಯೋದಯ | : 06:12:00 |
| ಸೂರ್ಯಾಸ್ತ | : 18:44:39 |
| ರಾಹು ಕಾಲ | : 14:02–15:36 |
| ಯಮಘಂಡ ಕಾಲ | : 06:12–07:46 |
| ಗುಳಿಕ ಕಾಲ | : 09:20–10:54 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 09–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.14 ಅಡಿ |
| ಒಳ ಹರಿವು | 5067 ಕ್ಯುಸೆಕ್ |
| ಹೊರ ಹರಿವು | 3699 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.417 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1579.18 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 293 ಕ್ಯುಸೆಕ್ |
| ಸಾಮರ್ಥ್ಯ | 4.085 ಟಿಎಂಸಿ |

ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds
Display
Take Advantage of Our Special Discounted rates
For More Information 9448633038 www.hampitimes.com

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ವಿಜಯನಗರದ ಕೀರ್ತಿ ಹೆಚ್ಚಿಸಿದ ಸಂಜನಾ-ನಿರ್ಮಲಾಗೆ ಅಭಿನಂದನೆ ಸುರಿಮಳೆ

**ಹಂಪಿ ಟೈಮ್ಸ್ ಹೊಸಪೇಟೆ**

2024–25 ನೇ ಸಾಲಿನ ರಾಜ್ಯದ ಪಿಯು ಫಲಿತಾಂಶದಲ್ಲಿ ಸಂಜನಾ ಬಾಯಿ ರಾಜ್ಯಕ್ಕೆ ಪ್ರಥಮ ಮತ್ತು ನಿರ್ಮಲಾ ರಾಜ್ಯಕ್ಕೆ ದ್ವಿತೀಯ ಸ್ಥಾನಗಳನ್ನು ಪಡೆಯುವ ಮೂಲಕ ವಿಜಯನಗರ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಐಎಎಸ್ ಮಾಡುವ ಕನಸು ಹೊಂದಿರುವ ಈ ವಿದ್ಯಾರ್ಥಿನಿಯರಿಗೆ ಜಿಲ್ಲಾಡಳಿತ ಸಹಕಾರ ನೀಡಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.



ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಸಭಾಂಗಣದಲ್ಲಿ ಬುಧವಾರ ಸಾಧನೆಗೈದ ವಿದ್ಯಾರ್ಥಿನಿಯರಿಗೆ ಜಿಲ್ಲಾಧಿಕಾರಿ ಸನ್ಮಾನಿಸಿ ಅಭಿನಂದಿಸಿ ಮಾತನಾಡಿದರು. ಬಡತನವನ್ನು ಕಿತ್ತೊಸೆಯುವ ಶಕ್ತಿ ಶಿಕ್ಷಣಕ್ಕಿದೆ. ನಿಶ್ಚಿತ ಗುರಿಯೊಂದಿಗೆ ಪರಿಶ್ರಮಪಟ್ಟಿದ್ದರ ಫಲವಾಗಿ ಉತ್ತಮ ಫಲಿತಾಂಶ ನಿಮ್ಮದಾಗಿದೆ. ಉನ್ನತ ವಿದ್ಯಾಭ್ಯಾಸದೊಂದಿಗೆ ಅತ್ಯುನ್ನತ ಸ್ಥಾನಮಾನಗಳನ್ನು ಪಡೆಯಬೇಕು. ಮನುಷ್ಯ ಎಷ್ಟೇ ಎತ್ತರಕ್ಕೂ ಬೆಳೆದರೂ ತಂದೆ ತಾಯಿಗಳನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ತಂದೆ ತಾಯಿಯೇ ಕಣ್ಣೆದುರಿಗೆ ಕಾಣುವ ದೇವರುಗಳು. ಮುಂದಿನ ಶಿಕ್ಷಣದ ವೆಚ್ಚವನ್ನು ಭರಿಸಲಾಗುವುದು. ನೀವು ಕಂಡ ಐಎಎಸ್ ಕನಸು ಸಾಕಾರವಾಗಲಿ ಎಂದು ಹಾರೈಸಿದರು.




ಕೂಡ್ಲಿಗಿ ಶಾಸಕ ಡಾ.ಎನ್.ಟಿ. ಶ್ರೀನವಾಸ ಅವರು ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿ. ಭವಿಷ್ಯ ಶಿಕ್ಷಣಕ್ಕೆ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿ, 25000 ರೂ ನಗದು, ಲ್ಯಾಪ್‌ಟಪ್ ನೀಡಿ ಸನ್ಮಾನಿಸಿದರು.



ಹೊಸಪೇಟೆ ತಹಶೀಲ್ದಾರ್ ಶೃತಿ ಎಂ.ಮಳ್ಳಪ್ಪಗೌಡರ ಅವರು ರಾಜ್ಯದ ಗಮನ ಸೆಳೆದ ಮರಿಯಮ್ಮನಹಳ್ಳಿ ಹೋಬಳಿಯ ಗುಂಡಾ ಗ್ರಾಮದ ವಿದ್ಯಾರ್ಥಿನಿಯ ಸಂಜನಾ ಬಾಯಿ ಅವರ ಮನೆಗೆ ತೆರಳಿ ಸನ್ಮಾನಿಸಿದರು.

## ಆನಂದ ಬಾಣ




# ಇಂದು ಹಜ್ ಯಾತ್ರಾರ್ಥಿಗಳಿಗೆ ತರಬೇತಿ

**ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಹಜ್ ತರಬೇತಿ ಶಿಬಿರ ಸಮಿತಿಯಿಂದ ಏ.10 ರಂದು ಬೆಳಿಗ್ಗೆ 9ಕ್ಕೆ ನಗರದ ಬಸವೇಶ್ವರ ವೃತ್ತದ ಬಳಿ ಇರುವ ಸಿದ್ದಿಪ್ರಿಯ ಕಲ್ಯಾಣಮಂಟಪದಲ್ಲಿ 6 ಜಿಲ್ಲೆಗಳ ಹಜ್ ಯಾತ್ರೆಯ ಯಾತ್ರಾರ್ಥಿಗಳಿಗೆ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಹೆಚ್.ಎನ್.ಎಫ್. ಮೊಹಮ್ಮದ್ ಇಮಾಮ್ ನಿಯಾಜಿ ತಿಳಿಸಿದ್ದಾರೆ.

ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ಕೊಪ್ಪಳ, ವಿಜಯನಗರ ಹಾಗೂ ಗದಗ ಜಿಲ್ಲೆಗಳಿಂದ ಕರ್ನಾಟಕ ರಾಜ್ಯ ಹಜ್ ಕಮಿಟಿಯ ಆಯ್ದ ಹಜ್ ಯಾತ್ರೆಯ ಯಾತ್ರಾರ್ಥಿಗಳಿಗೆ ಧಾರ್ಮಿಕ ಶಿಸ್ತು, ಸಂಯಮ, ಸೌಹಾರ್ದತೆಗಳಿಗೆ ಸಂಬಂಧಿಸಿದಂತೆ ಅರ್ಥಪೂರ್ಣ ಶಿಬಿರ ಜರುಗಲಿದೆ. ಶಿಬಿರವನ್ನು ಸಂಸದರು, ಶಾಸಕರು ಹಾಗೂ ಹಿರಿಯ ಮುಖಂಡರು ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದ್ದಾರೆ.

# ರಥೋತ್ಸವಗಳು ಸೌಹಾರ್ದತೆ ಸಂಕೇತ

## 17 ವರ್ಷದಿಂದ ರದ್ದಾದ ಚಿರಬಿ ರಥೋತ್ಸವ ನಡೆಯಲಿ: ಶಾಸಕ

**ಹಂಪಿ ಟೈಮ್ಸ್ ಕೊಟ್ಟೂರು**

ಚಿರಬಿ ಮೂಗಬಸವೇಶ್ವರ ಸ್ವಾಮಿ ರಥೋತ್ಸವವು ಕಳೆದ 17 ವರ್ಷಗಳಿಂದ ರದ್ದಾಗಿದ್ದು, ನಿಖರ ಮಾಹಿತಿ ತಿಳಿಯಲು ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಅವರಿಗೆ ಚಿರಬಿ ಗ್ರಾಮದ ಸಿ.ಎಂ. ವೀರಯ್ಯ ಮೂಗಬಸವೇಶ್ವರ ಸ್ವಾಮಿ ರಥೋತ್ಸವ ಯಾವ ಕಾರಣಕ್ಕೆ ರದ್ದಾಯಿತು ಎಂದು ಕೂಲಂಕುಷವಾಗಿ ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಚಿರಬಿ ಮೂಗಬಸವೇಶ್ವರ ಸ್ವಾಮಿ ದೇವಾಲಯದ ಧಾರ್ಮಿಕದತ್ತಿ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ, ಮೂಗಬಸವೇಶ್ವರ ಸ್ವಾಮಿ ದೇವಾಲಯ ಸರ್ಕಾರದ ಭೂಮಿಯಲ್ಲಿದ್ದು, 11 ಎಕರೆ ವಿಸ್ತೀರ್ಣ ಹೊಂದಿದೆ. ದೇವಾಲಯವೂ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದೆ ಎಂದು ಜಿಲ್ಲಾಧಿಕಾರಿಗೆ ಮಾಹಿತಿ ನೀಡಿದರು.

ಸರ್ಕಾರದ ಭೂಮಿಯಲ್ಲಿ ದೇವಾಲಯವಿದ್ದು, ಧಾರ್ಮಿಕ ದತ್ತಿ ಇಲಾಖೆಯ ಸುಪರ್ಧಿಯಲ್ಲಿ ದೇವಾಲಯ ಇರುವುದರಿಂದ ಇದರ ಮೇಲೆ ಸರ್ಕಾರೇತರ ವ್ಯಕ್ತಿಗಳು ಹಕ್ಕು ಮತ್ತು ಅಧಿಕಾರ ಸಾಧಿಸಲು ಬರುವುದಿಲ್ಲ ಎಂದರು. ಆದರೆ ಈ ಕುರಿತು ರಾಂಪುರ ಮತ್ತು ಚಿರಬಿ ಗ್ರಾಮಸ್ಥರು ಕೋರ್ಟ ಮೆಟ್ಟಿಲೇರಿರುವುದರಿಂದ ನಾವು ಮಧ್ಯ ಪ್ರವೇಶ ಮಾಡಲು ಬರುವುದಿಲ್ಲ. ಈ ಸಭೆಗೆ ರಾಂಪುರ ಗ್ರಾಮಸ್ಥರು ಹಾಜರಾಗದ ಕಾರಣ ಶುಕ್ರವಾರ ಅವರನ್ನೂ ಕರೆಸಿ ಅಭಿಪ್ರಾಯ ಪಡೆದು ಮುಂದೇನು ಮಾಡಬೇಕು ಎಂದು ನಿರ್ಧರಿಸಲಾಗುವುದು ಎಂದರು.

ಸಭೆಯಲ್ಲಿ ಉಪಸ್ಥಿತರಿದ್ದ ಶಾಸಕ ನೇಮಿರಾಜ್ ನಾಯ್ಕ, ಮಾತನಾಡಿ, ರಥೋತ್ಸವ ಮತ್ತು ಜಾತ್ರೆಗಳು ಜರುಗುವುದು ಸಮಾಜದಲ್ಲಿ ಸೌಹಾರ್ಧತೆ, ಸಹಬಾಳ್ವೆ ಮೂಡಿಸಲು ಪುರಾತನ ಕಾಲದಿಂದ ಹಿರಿಯರು ಮಾಡುತ್ತಾ ಬಂದಿದ್ದಾರೆ. ಇದನ್ನು ನೀವೆಲ್ಲರೂ ಮುಂದುವರೆಸಿಕೊಂಡು ಹೋಗಬೇಕೆಂದು ಮನವಿ ಮಾಡಿದರು.

ಜಿ.ಪಂ ಮಾಜಿ ಉಪಾಧ್ಯಕ್ಷ ಪಿ.ಎಚ್. ದೊಡ್ಡರಾಮಣ್ಣ, ಮೂಗಬಸವೇಶ್ವರ ರಥೋತ್ಸವ ರದ್ದಾಗಿ 17 ವರ್ಷಗಳಾಗಿವೆ. ಇದರಿಂದ ಭಕ್ತರ ಮನಸಿಗೆ ಬಹಳ ನೋವಾಗಿದೆ. ಈಗಾಗುವುದು ಒಳ್ಳೆಯದಲ್ಲ, ರಾಂಪುರ ಗ್ರಾಮಸ್ಥರು ಮತ್ತು ಚಿರಬಿ ಗ್ರಾಮಸ್ಥರು ಕೋರ್ಟ ವ್ಯಾಜ್ಯವನ್ನು ಹಿಂಪಡೆದು ರಥೋತ್ಸವ ಜರುಗಿಸಿ ಎಂದು ಸಭೆಯಲ್ಲಿ ಸಲಹೆ ನೀಡಿದರು.

ತಾಪಂ ಇಒ ಡಾ. ಆನಂದ ಕುಮಾರ್, ಸರ್ಕಲ ಇನ್ಸಫೆಕ್ಟರ್ ವೆಂಟಕಸ್ವಾಮಿ ಒಂಟಿ ಪಾಲಪ್ಪ, ಎಂ.ಎಂ.ಜೆ. ಮೂಗಪ್ಪ, ಎಂ.ಎಂ.ಜೆ ಸ್ವತಂತ್ರ, ಪಿ. ನಾಗರಾಜ್, ಬೂದಿ ನಾಗರಾಜ್, ಗಂಗಮ್ಮನಹಳ್ಳಿ ಬಸವರಾಜ್, ಬೆಂಕಿ ರಮೇಶ, ಭೀಮಪ್ಪ ಸೇರಿದಂತೆ ಇತರರು ಇದ್ದರು.

# 1.32 ಕೋಟಿ ರೂ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ



**ಹಂಪಿ ಟೈಮ್ಸ್ ಕೊಟ್ಟೂರು.**

ಪಟ್ಟಣಲ್ಲಿ ಇನ್ನು ಎರಡೂವರೆ ವರ್ಷದೊಳಗೆ ಶೇ.80 ರಷ್ಟು ಚರಂಡಿ, ಸಿಸಿ ರಸ್ತೆ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಪೂರ್ಣಗೊಳಿಸುವೆ ಎಂದು ಕ್ಷೇತ್ರದ ಶಾಸಕರು ಕೆ.ನೇಮಿರಾಜ್ ನಾಯ್ಕ ಭರವಸೆ ನೀಡಿದರು.

ಪಟ್ಟಣದಲ್ಲಿ ಮಂಗಳವಾರ 8,10,12 ಮತ್ತು 16ನೇ ವಾರ್ಡ್ ನಲ್ಲಿ 1.32 ಕೋಟಿ ಸಿಸಿ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ದ. ರಾ.ಬೇಂದ್ರೆ ಶಾಲೆ ರಸ್ತೆ, ಸರ್ಕಾರಿ ಆಸ್ಪತ್ರೆ ಹಿಂಭಾಗದ ರಸ್ತೆ ಹಾಗೂ ಬಸವೇಶ್ವರ ಬಡಾವಣೆಯ ರಸ್ತೆಗಳು ಕೆಕೆಆರ್‌ಡಿಬಿ ಮತ್ತು ಡಿಎಂಎಫ್ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗೆ ಪೂಮಿಪೂಜೆ ನೆರವೇರಿದೆ.ಬಡಾವಣೆನಿರ್ಮಾಣಗೊಂಡ ವರ್ಷದಿಂದ ರಸ್ತೆ ಕಾಣದೆ ನಿರ್ಲಕ್ಷಕ್ಕೊಳಗಾಗಿದ್ದ ಈ ಓಣಿಗೆ, ಇದೀಗ ಸಿಸಿ ರಸ್ತೆ ನಿರ್ಮಾಣ ಭಾಗ್ಯ ದೊರೆತಿದ್ದು, ನಿವಾಸಿಗಳೆಲ್ಲ ಹರ್ಷ ವ್ಯಕ್ತಪಡಿಸಿದರು.

ರಸ್ತೆಗಳ ಭೂಮಿಪೂಜೆ ವೇಳೆ ಜಿ.ಪಂ ಮಾಜಿ ಸದಸ್ಯರು ಎಂ.ಎಂ.ಜೆ ಹರ್ಷವರ್ಧನ, ಜೆಡಿಎಸ್ ಕ್ಷೇತ್ರದ ಅಧ್ಯಕ್ಷ ವೈ.ಮಲ್ಲಿಕಾರ್ಜುನ್,ಎಪಿಎಂಸಿ ಮಾಜಿ ಅಧ್ಯಕ್ಷರು ಬೂದಿ ಶಿವಕುಮಾರ್, ಪಪಂ ಸದಸ್ಯರು ಬಾವಿಕಟ್ಟಿ ಶಿವಾನಂದ, ಬೋರವೆಲ್ ತಿಪ್ಪೇಸ್ವಾಮಿ, ಮಾಜಿ ಸದಸ್ಯರು ಸುಧಾಕರಗೌಡ ಪಾಟೀಲ್, ಕಾಮಶೆಟ್ಟಿ ಕೊಟ್ರೇಶ್,ವರ್ತಕರು ಎನ್. ಅಪ್ಪಾಜಿ, ಇಂಜಿನೀಯರ್ ಜಿ.ವಿಜಯ ಕುಮಾರ್ ಚೌವಾಣ, ಅಲಬೂರ ಹೇಮಣ್ಣ ಇತರರು ಇದ್ದರು.

# ಸರ್ವಿಸ್ ರಸ್ತೆಗೆ ಕೊಳಚೆ ನೀರು ಹೆಚ್ಚಿದ ರೋಗದ ಭೀತಿ

**ಮಾರೇಶ ತಿಪ್ಪೇಹಳ್ಳಿ**
**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಹೊಸಹಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50ರ ಪಕ್ಕದಲ್ಲಿ ನಿರ್ಮಿಸಿರುವ ಸರ್ವಿಸ್ ರಸ್ತೆಯು ಅವೈಜ್ಞಾನಿಕ ಕಾಮಗಾರಿಯಾಗಿದ್ದು, ಗ್ರಾಮದಲ್ಲಿ ಗ್ರಾಮಸ್ಥರು ದಿನನಿತ್ಯ ಉಪಯೋಗಿಸಿದ ನೀರು ಹಾಗೂ ಮಳೆಯ ನೀರು ಚರಂಡಿಯಲ್ಲಿ ಹರಿಯದೆ ಸಾರ್ವಜನಿಕರು ಓಡಾಡುವ ರಸ್ತೆಯಲ್ಲಿ ನಿಂತು ಗಬ್ಬೆದ್ದು ನಾರುತ್ತಿದೆ.

ರಸ್ತೆಯ ಪಕ್ಕದಲ್ಲಿ ವಾಸ ಮಾಡುತ್ತಿರುವ ಕುಟುಂಬಗಳ ಪರಿಸ್ಥಿತಿ ಹೇಳತಿರದ್ದಾಗಿದೆ. ಈ ಕೊಳಚೆ ನೀರಿನಲ್ಲಿ ಸೊಳ್ಳೆಗಳ ಸಂತತಿ ಜಾಸ್ತಿಯಾಗಿದ್ದು ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿದೆ. ಕ್ರಿಮಿ ಕೀಟಗಳು, ವಿಷ ಜಂತುಗಳು, ಓಡಾಡುತ್ತವೆ. ರಾತ್ರಿ ಸಮಯದಲ್ಲಿ ವೃದ್ದರು ಓಡಾಡುವುದೇ ದುಸ್ತರವಾಗಿದೆ. ಈ ರಸ್ತೆ ಪಕ್ಕದಲ್ಲಿ ವಾಸಿಸುತ್ತಿರುವವರು ಸೊಳ್ಳೆಗಳ ಹಾವಳಿಯಿಂದ ಬೇಸತ್ತು ಹೋಗಿ ಡೆಂಗ್ಯೂ, ಮಲೇರಿಯಾ ಕಾಲರ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಲ್ಲಿದ್ದಾರೆ. ಈ ರಸ್ತೆಯಲ್ಲಿ ನೀರು ನಿಲ್ಲದಂತೆ ಸುಸಜ್ಜಿತ ಚರಂಡಿ ನಿರ್ಮಾಣ ಉತ್ತಮವಾದ ರಸ್ತೆ ಕಾಮಗಾರಿ ಮಾಡಿ ಕೊಡುವಂತೆ ಇಲ್ಲಿನ ನಿವಾಸಿಗಳು ಮತ್ತು ಸಾರ್ವಜನಿಕರು ಸಂಬಂಧಪಟ್ಟ ಇಲಾಖೆ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಮಾಡಿದರೂ ಪ್ರಯೋಜನವಿಲ್ಲದಂತಾಗಿದ್ದು, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಜನರು ಹಿಡಿ ಶಾಪ ಹಾಕುತ್ತಿದ್ದಾರೆ. ಜನಪ್ರತಿನಿಧಿಗಳು ಸಹ ಅನೇಕ ಬಾರಿ ಬಂದು ಸ್ಥಳ ಪರಿಶೀಲಿಸಿದರೂ ಏನೂ ಪ್ರಯೋಜನವಾಗಿಲ್ಲದಿರುವುದು ವಿಪರ್ಯಾಸ.



ಈ ಕೂಡಲೇ ಜನಪ್ರತಿನಿಧಿಗಳು ಸಂಬಂಧಿಸಿದ ಅಧಿಕಾರಿಗಳು ರಸ್ತೆ ಮೇಲೆ ನೀರು ನಿಲ್ಲದಂತೆ ವ್ಯವಸ್ಥೆ ಮಾಡಿಸಿ ಇಲ್ಲಿ ವಾಸಿಸುವ ಕುಟುಂಬದವರಿಗೂ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡಬೇಕಾಗಿ ಹೊಸಹಳ್ಳಿ ಗ್ರಾಮದ ನಾಗರಿಕರು ವಿವಿಧ ದಲಿತ ಪರ ಸಂಘಟನೆಯ ಮುಖಂಡರು ಒತ್ತಾಯಿಸಿದ್ದಾರೆ.



ರಾಷ್ಟ್ರೀಯ ಹೆದ್ದಾರಿ 50 ರ ಪಕ್ಕದಲ್ಲಿ ದಿನನಿತ್ಯ ಬಳಸುವಂತಹ ನೀರು ನಿಂತಿರುವುದು ನಮ್ಮ ಗಮನಕ್ಕಿದೆ. ಈ ಹಿಂದೆ ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲೂಕು ಮಟ್ಟದ ಅಧಿಕಾರಿಗಳು ಇಲ್ಲಿಗೆ ಭೇಟಿ ಮಾಡಿದ್ದಾರೆ. ಅವರ ಮಾರ್ಗದರ್ಶನದಂತೆ. ಸಿಸಿ ಚರಂಡಿಯ ಕಾಮಗಾರಿಯನ್ನು ಅನುಮೋದನೆಗೆ ಕಳಿಸಿದ್ದೇವೆ. ಅನುಮೋದನೆಗೊಂಡ ಬಳಿಕ ಕಾಮಗಾರಿ ಪ್ರಾರಂಭ ಮಾಡುತ್ತೇವೆ.

**– ವಿನಯ್ ಕುಮಾರ್**
ಗ್ರಾಮ ಪಂಚಾಯಿತಿ ಪಿಡಿಒ ಹೊಸಹಳ್ಳಿ



**ಇಲ್ಲಿ ಹರಿದು ಬರುವಂತ ಕೊಳಚೆ ನೀರಿನಿಂದ ಹಲವಾರು ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಲ್ಲಿ ಜನರು ಜೀವನ ನಡೆಸುತ್ತಿದ್ದು. ಸಂಜೆಯಾದರೆ ಸಾಕು ಸೊಳ್ಳೆಗಳ ಕಾಟ ಮತ್ತು ವಿಷ ಜಂತುಗಳದ್ದೇ ಚಿಂತೆಯಾಗಿದೆ, ಇದಕ್ಕೆ ಸಂಬಂಧಪಟ್ಟವರು ಈ ಕೊಳಚೆ ನೀರನ್ನು ಬೇರೆ ಕಡೆ ಹೋಗುವಂತೆ ಮಾಡಿದರೆ, ತುಂಬಾ ಉಪಕಾರವಾಗುತ್ತೆ.**

**– ಎಸ್ ಎಂ ಮಂಜುನಾಥ** ಯುವ ಮುಖಂಡ ಹೊಸಹಳ್ಳಿ

# ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಡಿಸಿ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ಪುನೀತ್‌ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ಎನ್.ಎಂ. ಅಲಿ ಅಕ್ರಮ್ ಶಾ ಉದ್ಘಾಟಿಸಿ, ಧ್ವಜವಂದನೆ ಸ್ವೀಕರಿಸಿದರು.

ವಿಜಯನಗರ ಜಿಲ್ಲೆಯ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷರಾದ ಜಿ. ಮಲ್ಲಿಕಾರ್ಜುನಗೌಡ, ರಾಜ್ಯ ಪರಿಷತ್ ಸದಸ್ಯರಾದ ರಾಘವೇಂದ್ರ, ಜಿಲ್ಲಾ ಖಜಾಂಚಿ ಕೆ. ಮಲ್ಲೇಶಪ್ಪ, ಜಿಲ್ಲಾ ಕಾರ್ಯದರ್ಶಿಗಳಾದ ಟಿ. ಪಂಪಣ್ಣ ಹಾಗೂ ಜಿಲ್ಲಾ ಮಟ್ಟದ ನೌಕರರ ಕ್ರೀಡಾಕೂಟದಲ್ಲಿ ಜಿಲ್ಲೆಯ ತಾಲೂಕುಗಳ ಕರ್ನಾಟಕ ರಾಜ್ಯ ಸರ್ಕಾರ ನೌಕರರ ಸಂಘದ ಅಧ್ಯಕ್ಷರು ರಾಜ್ಯ ಪರಿಷತ್ ಸದಸ್ಯರು ಹಾಗೂ ಸರ್ವ ಪದಾಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ಭಾಗದಿಂದ ನೌಕರರು ಭಾಗವಹಿಸಿದ್ದರು